ದಿನಾಂಕ 24-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-</u>**

1. ನನಗೆ ಓದಲು ಬರೆಯಲು ಬರುವುದಿಲ್ಲ. ನಮ್ಮ ಮನೆಯಲ್ಲಿ ನಾನು, ನನ್ನ ಅಕ್ಕ & ನನ್ನ ಮಾವ ದೇವಪುತ್ರ ಇರುತ್ತೇವೆ. ನಮ್ಮ ಮನೆಯ ಸುತ್ತಮುತ್ತ ಬಹಳಷ್ಟು ವಾಸದ ಮನೆಗಳಿವೆ ಎಂದರೆ ಸರಿ.

2. 1ನೇ ಆರೋಪಿತರಿಗೆ ಸಾಲವನ್ನು ರಾರಾಯಪ್ಪ, ಸುಕಾಲಪೇಟೆ ರವರ ಬಳಿಯಿಂದ ರೂ.1 ಲಕ್ಷ & ಬ್ಯಾಂಕಿನಿಂದ ರೂ.2 ಲಕ್ಷ ಪಡೆದು ಕೊಟ್ಟಿದ್ದೆನು. ಸದರಿ ಸಾಲವನ್ನು ಚಾಸಾ-4 ರವರ ಹೆಸರಿನಲ್ಲಿ ಮಾಡಿದ್ದೆನು. ಸದರಿ ಸಾಲದ ಪತ್ರಕ್ಕೆ ಆರೋಪಿತರು ಸಹಿ ಮಾಡಿದ್ದರು. ಸದರಿ ಪತ್ರಗಳು ಸಾಲ ಕೊಟ್ಟವರ ಬಳಿ ಇವೆ.

3. ಘಟನೆ ನಡೆದಾಗ ದೇವಪುತ್ರರವರು ಬೆಂಗಳೂರಿನಲ್ಲಿದ್ದರು. ಘಟನೆಯು ಮನೆಯ ಒಳಗಡೆ ಆಗಿತ್ತು, ಆಗ ನಾನು ಮನೆಯಲ್ಲಿ ಮಲಗಿದ್ದೆ, ಆರೋಪಿತರು ಬಂದು ನನ್ನನ್ನು ಎಬ್ಬಿಸಿದ್ದರು. ಘಟನೆಯು ಅರ್ಧ ಗಂಟೆಯ ಕಾಲ ಆಗಿತ್ತು. ನಾನು ಆಸ್ಪತ್ರೆಗೆ ಬಾಡಿಗೆಯ ಆಟೋದಲ್ಲಿ ಹೋಗಿದ್ದೆನು. ಆಸ್ಪತ್ರೆಗೆ ಹೋಗುವಾಗ ಮಧ್ಯದಲ್ಲಿ ನಗರ ಠಾಣೆ ಬರುತ್ತದೆ ಎಂದರೆ ಸರಿ. ನಮ್ಮ ಮನೆಯಿಂದ ಅರ್ಧ ಕಿ.ಮೀ. ದೂರದಲ್ಲಿ ನಗರ ಠಾಣೆ ಇದೆ ಎಂದರೆ ಸರಿ. ಆಸ್ಪತ್ರೆಯಲ್ಲಿ ನಾನು 2 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆ. ಘಟನೆಯಾದ 3 ದಿನಕ್ಕೆ ನಾನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದೆನು.

4. ಠಾಣೆಗೆ ನಾನು ಡಿಸ್ಚಾರ್ಜ್ ಆಗಿ ಹೋದ ನಂತರ ಹೋಗಿದ್ದೆ. ಘಟನೆ ನಡೆದ 4-5 ದಿನಗಳ ನಂತರ ಠಾಣೆಗೆ ಹೋಗಿದ್ದೆ. ದೂರನ್ನು ಬರೆದುಕೊಟ್ಟಿದ್ದೆ & ಬಾಯಿ ಮಾತಿನಲ್ಲಿಯೂ ಹೇಳಿದ್ದೆ. ದೂರು ಕೊಡಲು ತಡವಾದ ಬಗ್ಗೆ ದೂರಿನಲ್ಲಿ ಹೇಳಿಲ್ಲ.

5. ಪಂಚನಾಮೆ ಮಾಡಲು ಘಟನೆಯಾದ 3 ದಿನಗಳ ನಂತರ ಪೋಲೀಸರು ಬಂದಿದ್ದರು. ಪೋಲೀಸರಿಗೆ ಘಟನೆ ಮನೆಯ ಒಳಗಡೆ ಆಗಿತ್ತು ಎಂದು ತೋರಿಸಿದ್ದೆನು. ಪೋಲೀಸರು ಪಂಚನಾಮೆಯನ್ನು ಮನೆಯ ಒಳಗಡೆ ಮಾಡಿದ್ದರು.

6. ನನ್ನ ಅಕ್ಕ ಸಹ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಳು. ದುಡ್ಡು ಬೇರೆಯವರಿಂದ ಪಡೆದು ಸಾಲ ಕೊಟ್ಟಿದ್ದೆವು ಎಂದು ಪೋಲೀಸರ ಮುಂದೆ ಹೇಳಿದ್ದೆವು.

7. ನಾನು ಗ್ಯಾರೇಜ್ ಕೆಲಸ ಮಾಡುತ್ತಿದ್ದೇನೆ. ನೀವು ಹೇಳಿದಷ್ಟು ಹಣವನ್ನು ಆರೋಪಿತರಿಗೆ ಕೊಡುವ ಆರ್ಥಿಕ ಶಕ್ತಿ ನಿಮಗೆ ಇಲ್ಲ ಎಂದರೆ ಸರಿಯಲ್ಲ. ಆರೋಪಿ & ನೀವು ಮೊದಲು ಚೆನ್ನಾಗಿದ್ದಿರಿ ಎಂದರೆ ಸರಿ.

8. ನಿಮ್ಮ ಮಾವ ದೇವಪುತ್ರನ ಮಾತು ಕೇಳಿ, ಆರೋಪಿತರಿಂದ ಹಣ ಕಬಳಿಸುವ ಉದ್ದೇಶದಿಂದ ನೀನು & ನಿಮ್ಮ ಅಕ್ಕ ಸೇರಿ ಸುಳ್ಳು ದೂರು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ.

9. ಆರೋಪಿತರು ನಿಮ್ಮ ಮನೆಗೆ ಬಂದಿಲ್ಲ, ನಿಮಗೆ & ನಿಮ್ಮ ಅಕ್ಕನಿಗೆ ಹೊಡೆ ಬಡೆ ಮಾಡಿಲ್ಲ, ಕುತ್ತಿಗೆ ಹಿಡಿದು ದಬ್ಬಿಲ್ಲ, ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಿಮಗೆ ಜೀವದ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಿಮ್ಮಿಂದ ಯಾವುದೇ ಸಾಲ ಪಡೆದಿಲ್ಲ, ನೀವು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಿಮ್ಮ & ಆರೋಪಿತರ ನಡುವೆ ವೈಮನಸ್ಸು ಇರುವ ಕಾರಣ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**